## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

### ಸಿ.ಸಿ. ನಂ.33/2014

CW-1/PW-2

| | | |
|---|---|---|
| ಹೆಸರು | :- | ವಿಶ್ವನಾಥ್ |
| ತಂದೆ ಹೆಸರು | :- | ಮುತ್ತುರಾಜ್ |
| ವಯಸ್ಸು | :- | 43 ವರ್ಷ |
| ವೃತ್ತಿ | :- | ಚಾಲಕ |
| ವಾಸ ಸ್ಥಳ | :- | ಸಿಂಧುಹಳ್ಳಿ, ಮೈಸೂರು |
| ದಿನಾಂಕ | :- | 20-02-2025 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ ಸಾಕ್ಷಿಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು ಅತ್ತಿಬೆಲೆ ಆಂಜನೇಯ ಟ್ರಾನ್ಸ್ ಪೋರ್ಟ್ ನಲ್ಲಿ ಚಾಲಕನಾಗಿ ಗೂಡ್ಸ್ ವಾಹನದಲ್ಲಿ ಕೆಲಸ ಮಾಡುತ್ತಿದ್ದೆ. ಸುಮಾರು 10 ವರ್ಷಗಳ ಹಿಂದೆ ರಾತ್ರಿ 10.30 ರಿಂದ 11.00 ಗಂಟೆ ಸಮಯಕ್ಕೆ ಬೆಂಗಳೂರು ಬೊಮ್ಮಸಂದ್ರದಿಂದ ದ್ವಿಚಕ್ರ ವಾಹನದ ಬಿಡಿ ಭಾಗಗಳನ್ನು ಟೆಂಪೋದಲ್ಲಿ ಹಾಕಿಕೊಂಡು ಮೈಸೂರಿಗೆ ಹೋಗುತ್ತಿದ್ದಾಗ ರಾಮನಗರ ಬಿಟ್ಟು ಮುಂದೆ ಮೈಸೂರು ಕಡೆ ಹೋಗುತ್ತಿದ್ದಾಗ ಒಂದು ಶಾಲೆಯ ಪಕ್ಕದಲ್ಲಿ ಒಬ್ಬ ವ್ಯಕ್ತಿ ಕೈ ಅಡ್ಡ ಹಿಡಿದನು. ಅದಕ್ಕೆ ನಾನು ದ್ವಿಚಕ್ರ ವಾಹನ ಪಂಚರ್ ಆಗಿರಬಹುದು ಎಂದು ನಿಲ್ಲಿಸಿದೆ. ಅವರು ಗಾಡಿ ಪಂಚರ್ ಆಗಿದೆ ನನ್ನ ಅಣ್ಣ ಟೈರ್ ತರುತ್ತಾರೆ ಎಂದು ಹೇಳಿದರು. ನನ್ನ ಟೆಂಪೋದ ಎಡಭಾಗದ ಡೋರ್ ತೆಗೆದು ಮೂರು ಜನ ಹತ್ತಿದರು. ಮಚ್ಚನ್ನು ನನ್ನ ಕತ್ತಿನ ಬಳಿ ಹಿಡಿದು ನಿನ್ನ ಬಳಿ ಏನಿದೆ ಕೊಡು ಎಂದು ಹೆದರಿಸಿದರು. ನನ್ನ ಬಳಿ 700/- ರೂಪಾಯಿ, ಒಂದು ಮೊಬೈಲ್, ಒಂದು ಪರ್ಸ್ ಇತ್ತು. ಅದನ್ನು ಅವರು ಕಿತ್ತುಕೊಂಡರು. ನಾನು ಹೆದರಿ

ಹೊರಟುಹೋದೆ. ನಂತರ ಚನ್ನಪಟ್ಟಣದ ಪೊಲೀಸ್ ಠಾಣೆಗೆ ಹೋಗಿ ದೂರು ಕೊಡಲು ಹೋದಾಗ, ರಾಮನಗರ ಪೊಲೀಸ್ ಠಾಣೆಗೆ ಹೋಗಿ ಎಂದು ತಿಳಿಸಿದರು. ಮಾರನೇ ದಿನ ಬೆಳಗ್ಗೆ ರಾಮನಗರ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟೆ. ಸದರಿ ದೂರನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ದೂರನ್ನು ನಿಪಿ-17 ಎಂದು, ನನ್ನ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಿರುತ್ತೇನೆ. ನಂತರ ಪೊಲೀಸರು ನನ್ನನ್ನು ಎಲ್ಲಿಗೂ ಬರಮಾಡಿಕೊಂಡಿಲ್ಲ, ಆರೋಪಿತರನ್ನು ತೋರಿಸಿರುವುದಿಲ್ಲ. ಆ ಆಸಾಮಿಗಳ ಹೆಸರು, ವಿಳಾಸ ಗೊತ್ತಾಗಲಿಲ್ಲ. ನನ್ನ ಹಣ, ಪರ್ಸ್ ಮತ್ತು ಮೊಬೈಲ್ ಸಿಗಲಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. ಪೊಲೀಸರು ನನ್ನನ್ನು ಠಾಣೆಗೆ ಬರಮಾಡಿಕೊಂಡಿರುವುದಿಲ್ಲ.

ಈ ಹಂತದಲ್ಲಿ ಜಪ್ತಿ ಮಾಡಿಕೊಂಡ ನಗದು ಹಣ, ಮೊಬೈಲ್, ಪರ್ಸ್ ಮಚ್ಚನ್ನು ಸಂಬಂಧಪಟ್ಟ ತನಿಖಾಧಿಕಾರಿಗಳು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಅವುಗಳನ್ನು ತನಿಖಾಧಿಕಾರಿಗಳಿಂದ ಹಾಜರುಪಡಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.